ನಾವು ಕೊನೆಯದಾಗಿ ಚರ್ಚೆ ಮಾಡಬೇಕಾಗುತ್ತದೆ. ಈ ಹುಬ್ಬಳ್ಳಿ ಮಹಾನಗರ ಬಹಳ ದೊಡ್ಡಮಟ್ಟಿಗೆ ಬೆಳೆಯುತ್ತಿರುವುದರಿಂದ ಅಲ್ಲಿ ಹೇಗಾದರೂ ಒಂದು ಏವಿಯೇಷನ್ ಲೈನ್‌ನ್ನು ಹಾಕಬೇಕೆಂದು ಹೇಳಿ ನಮ್ಮ ಸರ್ಕಾರದ ಇಚ್ಛೆ ಇರುವುದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕಳೆದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ ಹಾಗೆ ಎವಿಯೇಷನ್ ಟರ್ಬೋ ಫ್ಯೂಯಿಲ್ 28 ಪರ್ಸೆಂಟ್ ಇದ್ದದ್ದನ್ನು 4 ಪರ್ಸೆಂಟ್‌ಗೆ ಇಳಿಸಿದ್ದಾರೆ. ಆದರೆ ದೈನಂದಿನ ಖರ್ಚಿನಲ್ಲಿ ಈ ಫ್ಯೂಯಿಲ್‌ದ್ದು ಮೊತ್ತವು ಬಹಳ ಹೆಚ್ಚಾದ್ದದರಿಂದ ಕಂಪನಿಯವರಿಗೆ ಈ ಒಂದು ಸರ್ವೀಸ್ ನಡೆಸುವುದಕ್ಕೆ ಬಹಳ ಅನುಕೂಲವಾಗುತ್ತದೆ. ಆ ರೀತಿಯಾಗಿ ಅನುಕೂಲವಾದರೆ ಮಾತ್ರ ಈ ಪ್ರೈವೇಟ್ ಏವಿಯೇಷನ್‌ರವರು ಮುಂಚೆ ಬಂದು ಈ ಒಂದು ಸರ್ವಿಸ್‌ನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಬೆಂಗಳೂರಿನಿಂದ ಬೆಳಗಾವಿ ಹಾಗೂ ಹುಬ್ಬಳ್ಳಿಗಳಿಗೆ ವಿಮಾನಯಾನ ಸೌಲಭ್ಯ ಒದಗಿಸುವುದು

444 (3322) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಿಂದ ಬೆಳಗಾವಿ ಹಾಗೂ ಹುಬ್ಬಳ್ಳಿಗೆ ಮತ್ತು ಮುಂಬೈಯಿಂದ ಬೆಳಗಾವಿ ಹುಬ್ಬಳ್ಳಿ ಮತ್ತು ಬೆಂಗಳೂರಿಗೆ ವಿಮಾನ ಸೌಕರ್ಯ ಪ್ರಾರಂಭಿಸುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಆ) ಇನ್ನು ಎಷ್ಟು ದಿನಗಳೊಳಗಾಗಿ ಈ ವಿಮಾನ ಸಾರಿಗೆಯನ್ನು ಪ್ರಾರಂಬಿಸಲಾಗುವುದು?

ಶ್ರೀ ಟಿ. ಜಾನ್ (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು)

ಅ) ಡೆಕ್ಕನ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್‌ನ ಘಟಕವಾದ ಏರ್ ಡೆಕ್ಕನ್ ರವರು ಪ್ರಾದೇಶಿಕ ವಾಯುಯಾನ ಸೇವೆ ಕಾರ್ಯಚರಣೆಯನ್ನು ಪ್ರಾರಂಭಿಸಲು ಅಗತ್ಯವಾದ ಅನುಮತಿಯನ್ನು ಪಡೆದಿದ್ದಾರೆ. ಬೆಂಗಳೂರು-ಹುಬ್ಬಳ್ಳಿ / ಬೆಳಗಾಂ ಮುಂಬೈ ಮತ್ತು ಹಿಂದಕ್ಕೆ ಸೇರಿದಂತೆ ವಿವಿಧ ಸ್ಥಳಗಳಿಗೆ ಹಂತ ಹಂತವಾಗಿ ವಾಯುಯಾನ ಸೇವೆಯನ್ನು ಅರಂಭಿಸುವ ಯೋಜನೆಯನ್ನು ಅಂತಿಮಗೊಳಿಸಲಾಗುತ್ತದೆ.

ಆ) ಏರ್ ಡೆಕ್ಕನ್ ರವರು 2003ರ ಆಗಸ್ಟ್ ಅಂತ್ಯಕ್ಕೆ ಮೊದಲ ಕಾರ್ಯಚರಣೆಗಳನ್ನು ಪ್ರಾರಂಭಿಸಲು ಪ್ರಸ್ತಾಪಿಸಿದ್ದಾರೆ.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ :- ಮಾನ್ಯ ಸಭಾಧ್ಯಕ್ಷರೆ, ಡೆಕ್ಕನ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್ ಇವರ ಜೊತೆ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗುತ್ತದೆ ಮತ್ತು ಅನುಮತಿಯನ್ನು ಪಡೆದುಕೊಂಡಿದ್ದಾರೆಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಈ ಅನುಮತಿಯನ್ನು ಅವರು ಯಾವಾಗ ಪಡೆದುಕೊಂಡಿದ್ದಾರೆ? ಹಂತಹಂತವಾಗಿ ಅಂದರೆ ಯಾವ ರೀತಿಯಲ್ಲಿ ಅವರು ಇದನ್ನು ಪ್ರಾರಂಭ ಮಾಡುತ್ತಾರೆಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಜಾನ್ :- ಮಾನ್ಯ ಸಭಾಧ್ಯಕ್ಷರೆ, ಈಗ ನಮ್ಮ ಮಾತಕತೆಯ ಪ್ರಕಾರ ಆಗಸ್ಟ್ ತಿಂಗಳಲ್ಲಿ ಪ್ರಾರಂಭ ಮಾಡುವುದಕ್ಕೆ ಎಲ್ಲಾ ಸಿದ್ದತೆಗಳನ್ನು ಮಾಡುತ್ತಿದ್ದೇವೆ. ಆಗಸ್ಟ್-ಸೆಪ್ಟೆಂಬರ್

ತಿಂಗಳೊಳಗೆ ಪ್ರಾರಂಭವಾಗುತ್ತದೆ, ಇದಕ್ಕೆ ಕೇಂದ್ರ ಸಿವಿಲ್ ಏವಿಯೇಷನ್ ಇಲಾಖೆಯಿಂದ ಅನುಮತಿಯನ್ನು ಕೂಡ ಪಡೆದಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೆ, ಆಗಸ್ಟ್ ತಿಂಗಳಲ್ಲಿ ಈ ಒಂದು ವಾಯು ಸೇವೆಯನ್ನು ಪ್ರಾರಂಭಿಸಲು ನಿರೀಕ್ಷಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಇದು ಕಳೆದ 6-8 ತಿಂಗಳಿಂದಲೂ ಈ ರೀತಿಯಾಗಿ ಸುದ್ದಿ ಬರುತ್ತಿದೆ, ಅದು ಕೇವಲ ನಿರೀಕ್ಷೆಯೋ ಅಥವಾ ಡೆಫನೇಟಾಗಿ ಸ್ಟಾರ್ಟ್ ಮಾಡುತ್ತಾರೋ? ಎನ್ನುವಂತಹದ್ದು ಆಗಬೇಕಾಗಿದೆ. ಇವತ್ತು ತಾವು ಮೂಲಭೂತ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯಸಚಿವರಾಗಿದ್ದೀರಿ, ತಾವು ಕೇವಲ ಬೆಂಗಳೂರು ಮಾತ್ರ ಸುತ್ತುವುದಲ್ಲ, ಇವತ್ತು ರಾಜ್ಯದಲ್ಲಿ ಹುಬ್ಬಳ್ಳಿಯೂ ಧಾರವಾಡ 2ನೇ ಮಹಾನಗರವಾಗಿದ್ದು ತಾವು ಅಲ್ಲಿಗೆ ಬರಬೇಕಾಗುತ್ತದೆ. ಅಲ್ಲಿ ವಿಮಾನಯಾನ ಸೇವೆಯ ಬಗ್ಗೆ ಸಂಬಂಧವಿದೆ ಅದರ ಬಗ್ಗೆಯೂ ಕೂಡ ತಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಮತ್ತು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾದರೆ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸದನದಲ್ಲಿದ್ದಾರೆ, ಕೇವಲ ಬೆಂಗಳೂರು ಮಾತ್ರ ಅಭಿವೃದ್ಧಿಯಾದರೆ ಸಾಲುವುದಿಲ್ಲ, ಬೇರೆ ಬೇರೆ ಪ್ರಮುಖ ನಗರಗಳು ಅದು ಹುಬ್ಬಳ್ಳಿ-ಧಾರವಾಡ ಇರಬಹುದು, ಗುಲ್ಬರ್ಗಾ ಇರಬಹುದು, ಬೆಳಗಾಂ ಇರಬಹುದು, ಈ ರೀತಿ ಮಹಾನಗರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಿದರೆ ಇಡೀ ರಾಜ್ಯ ಪ್ರಗತಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಈ ವಿಮಾನಯಾನದ ಸೌಲಭ್ಯ ಇದು ಬಹಳ ದಿವಸಗಳಿಂದಲೂ ಪೆಂಡಿಂಗ್ ಬೀಳುತ್ತಿದೆ, ತಾವು ಆಗಸ್ಟ್ ತಿಂಗಳು ಎಂದು ನಿರೀಕ್ಷೆ ಎಂದು ಹೇಳುತ್ತಿದ್ದಿರಲ್ಲಾ, ಅದು ನಿಶ್ಚಿತವಾಗಿ ಪ್ರಾರಂಭವಾಗಬೇಕು ಎಂಬುದು ನನ್ನ ಒತ್ತಾಯವಿದೆ. ಇದು ಕೇವಲ ಹೇಳಿಕೆಯಾಗಿ, ನಿರೀಕ್ಷೆಯಾಗಿ ಉಳಿಯಬಾರದು ಅದು ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗಲೇಬೇಕು ಮತ್ತು ಅದಕ್ಕೆ ನೀವು ಏನು ಗ್ಯಾರಂಟಿಯನ್ನು ಕೊಡುತ್ತೀರಿ? ಏಕೆಂದರೆ ಹಿಂದೆ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಹುಬ್ಬಳ್ಳಿ-ಧಾರವಾಡದ ಬಗ್ಗೆ ಒಂದು ಸೆಮಿನಾರ್ ನಡೆಸಿದ ಸಂದರ್ಭದಲ್ಲಿ ಯಾರಾದರೂ ಪ್ರೈವೇಟ್‌ನವರು ವಿಮಾನಯಾನವನ್ನು ಪ್ರಾರಂಭಿಸಿದರೆ ಸರ್ಕಾರದ ಕಡೆಯಿಂದ ನಿರ್ದಿಷ್ಟವಾದಂತಹ ಕೆಲವೊಂದು ಗ್ಯಾರಂಟಿ ಸೀಟುಗಳನ್ನು ನಾವು ಕೊಡುತ್ತೇವೆ, ಮತ್ತು ಚೇಂಬರ್ ಆಫ್ ಕಾಮರ್ಸ್‌ನವರೂ ಕೂಡ ನಮ್ಮ ಕಡೆಯಿಂದ ಇಷ್ಟು ಸೀಟುಗಳನ್ನು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಹೀಗಾಗಿ ಸರ್ಕಾರಕ್ಕೆ ಆ ರೀತಿ ಏನಾದರೂ ಧೋರಣೆಯಿದ್ದರೆ ಅದಕ್ಕೆ ಸ್ಪಷ್ಟೀಕರಣ ಮಾಡಿದರೆ ಆಗ ಆ ಪ್ರೈವೇಟ್‌ನವರಿಗೆ ಒಂದು ಗ್ಯಾರಂಟಿಯಾಗುತ್ತದೆ. ಇಲ್ಲದಿದ್ದರೆ ಕೆಲವು ದಿವಸ ಆರಂಭವಾಗಿ ಇನ್ನೂ ಕೆಲವೇ ದಿವಸಗಳಲ್ಲಿ ಅದು ಬಂದ್ ಆಗುತ್ತದೆ. ಹಿಂದೆಲ್ಲಾ ಈ ರೀತಿಯಾಗಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಹಾಗೂ ಮುಖ್ಯಮಂತ್ರಿಗಳು ಯಾವ ರೀತಿ ಬೆಂಗಳೂರಿಗೆ ಗಮನಹರಿಸಿದ್ದಾರೆ, ಅದೇ ರೀತಿ ಇತರೇ ನಗರಳ ಬಗ್ಗೆ ಅವರು ಯಾವ ರೀತಿ ಗಮನಹರಿಸಿದ್ದಾರೆಂಬುದನ್ನೂ ಕೂಡ ತಿಳಿಸಬೇಕು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ :- ಸನ್ಮಾನ್ಯ ಅಧ್ಯಕ್ಷರೇ, ಈಗ ನಾವು ಮೇಲಿಂದ ಮೇಲೆ ಹೇಳುತ್ತಿರುವುದು ಬೆಂಗಳೂರು ಒಂದನ್ನೇ ಬೆಳೆಸಿದರೆ ಕರ್ನಾಟಕದ ಅಭಿವೃದ್ಧಿಯಾಗಲಿಲ್ಲ, ಬೆಂಗಳೂರಿಗೆ ಎಲ್ಲಾ ಆದ್ಯತೆ ಕೊಡುವುದರಿಂದ ಮೂಲಭೂತವಾಗಿರುವ ಇಲ್ಲಿನ ಜನ ಬಹಳಷ್ಟು

ಸಂಕಟಪಡುತ್ತಿದ್ದಾರೆ. ಈ ಬೆಳವಣಿಗೆಯಿಂದ ಬಹಳಷ್ಟು ಮೂಲಭೂತ ಸೌಲಭ್ಯಗಳಿಗೆ ತೊಂದರೆಯಾಗುತ್ತಿದೆ. ಬೆಂಗಳೂರು ಒಂದನ್ನೇ ಬೆಳೆಸದೆ ಕರ್ನಾಟಕದಲ್ಲಿರುವ ಇತರೆ ಮಹಾನಗರಗಳನ್ನು ಬೆಳೆಸುವಂತಹ ಅಗತ್ಯತೆಯನ್ನು ಸರ್ಕಾರ ಯೋಜನೆ ಹಾಕಬೇಕಾಗುತ್ತದೆ. ಇದರಲ್ಲಿ ಹುಬ್ಬಳ್ಳಿ–ಧಾರವಾಡ ಏನಿದೆ, ಕಿಯೋನಿಕ್ಸ್‌ನವರಿಂದ ಐ.ಟಿ. ಪಾರ್ಕ್ ಏನು ಅಭಿವೃದ್ಧಿ ಮಾಡಿದ್ದಾರೆ ಆ ಕಿಯೋನಿಕ್ಸ್‌ನ ಈ ಬೆಳವಣಿಗೆ ಕರ್ನಾಟಕದ ಅಭಿವೃದ್ಧಿಯಲ್ಲಿ ಬಹು ದೊಡ್ಡ ಪಾತ್ರ ಬಹಿಸಬೇಕಾಗಿದೆ. ಇದರ ಜೊತೆಗೆ ಉತ್ತರ ಕರ್ನಾಟಕದಲ್ಲಿ ಅನೇಕ ಉದ್ದಿಮೆಗಳು ಸಹಿತ ವಿಮಾನಯಾನದ ಕೊರತೆಯಿಂದ ಇವತ್ತು ಬೆಳವಣಿಗೆಯಾಗುತ್ತಿಲ್ಲ. ಆ ದೃಷ್ಟಿಯಿಂದ ಈ ಸೌಲಭ್ಯ ಬಹಳ ಮುಖ್ಯವಾಗಿದೆ. ಈ ಚೇಂಬರ್ ಆಫ್ ಕಾಮರ್ಸ್ ಸಹಿತ ಕೆಲವು ಅನುಕೂಲತೆಗಳನ್ನು ಮತ್ತು ಪ್ಯಾಸೆಂಜರ್ ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಆದರೆ ವೇಳೆ ಮತ್ತು ಅದರ ದರ ಬಹಳಷ್ಟು ಯೋಗ್ಯವಾಗಿ ಈ ಬೆಳವಣಿಗೆ ಕಾಲದಲ್ಲಿ ನಿಗದಿಮಾಡಬೇಕಾಗಿದೆ. ಸರ್ಕಾರ ಆ ದಿಶೆಯಲ್ಲಿ ಏನು ನಿಗದಿ ಮಾಡಿ, ಶಾಶ್ವತವಾಗಿ ನಡೆಯುವಂತಹ ಪ್ರಯಾಣ ಸೌಲಭ್ಯವನ್ನು ಒದಗಿಸುತ್ತದೆ, ಆ 48 ಸೀಟುಗಳ ವಿಮಾನ ಆರಂಭವಾಗಿ ಅದು ಶಾಶ್ವತವಾಗಿ ನಡೆಯಬೇಕು ಅದರ ಬೆಳವಣಿಗೆಗೆ ಬೇಕಾಗುವ ಮೂಲಭೂತ ಅವಶ್ಯಕತೆ, ಉದ್ದೇಶವಿದೆ ಹುಬ್ಬಳ್ಳಿ–ಧಾರವಾಡ ಬೆಳವಣಿಗೆ ಏನು ಸಹಾಯ ಮಾಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಸನ್ಮಾನ್ಯ ಅಧ್ಯಕ್ಷರೇ, ಈಗ ಹುಬ್ಬಳ್ಳಿಗೆ ಏನು ವಿಮಾನಯಾನ ಸೌಖರ್ಯದ ಪ್ರಶ್ನೆಯನ್ನು ಕೇಳಲಾಗಿದೆ. ಅದು ಬಹಳ ಸೂಕ್ತವಾದುದೆಂದು ಭಾವಿಸುತ್ತೇನೆ. ಈಗ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಇಂತ ವಿಮಾನ ಮಾರ್ಗ ಸಂಪರ್ಕ ಇವತ್ತು ಆದಾಗ ವಾಣಿಜ್ಯ ಉದ್ದಿಮೆಗಳು ಬೆಳೆಯಲಿಕ್ಕೆ ಪೂರಕವಾಗುತ್ತದೆನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಗಮನಿಸಬೇಕು. ಈಗ ಆಗಸ್ಟ್ ತಿಂಗಳಲ್ಲಿ ನಿಖರವಾಗಿ ಪ್ರಾರಂಭವಾಗುತ್ತದೆಂದು ಮಂತ್ರಿಗಳು ಹೇಳಿದ್ದಕ್ಕೆ ಅದು ನಿಖರವಾಗಿ ಆರಂಭವಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ, ಪೂರಕವಾಗಿ ಬೆಳಗಾಂಗೆ ಕೂಡ ಆಪರೇಟ್ ಮಾಡುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ :– ಮಾನ್ಯ ಸದಸ್ಯರುಗಳು ಕಾತುರತೆಯನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ಬಗ್ಗೆ ಮಾತ್ರ ಗಮನ ಕೊಡುತ್ತಾರೆ ಎನ್ನತಕ್ಕಂಥದನ್ನು ನಿಮ್ಮ ಸಾರಾಸಗಟು ಕಾಮೆಂಟರಿ ಏನಿದೆ ಹೊರಗಡೆ ನೀವು ಮಾಡುತ್ತೀರಲ್ಲ ಬಹಿರಂಗ ಸಭೆಗಳಲ್ಲಿ ಅದನ್ನು ಇಲ್ಲಿ ಮಾಡುತ್ತೀರೆಂದು ನಾನು ನಿರೀಕ್ಷಿಸಿರಲಿಲ್ಲ. ಇದರ ಬಗ್ಗೆ ಸರ್ಕಾರ ಮತ್ತು ಮುಖ್ಯಮಂತ್ರಿ ಬಹಳ ಆಸ್ಥೆ ಮತ್ತು ಆಸಕ್ತಿಯಿಂದ ವಹಿಸಿಕೊಳ್ಳದೇ ಇದ್ದಿದ್ದರೆ ಇವತ್ತಿನ ದಿವಸ ಈ ಸದನದ ಮುಂದು ಮಾನ್ಯ ಸಚಿವರು ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗುತ್ತದೆಂದು ಧೈರ್ಯದಿಂದ ಆ ಮಾತುಗಳನ್ನು ಹೇಳುತ್ತಿರಲಿಲ್ಲ. ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು. ಡೆಸ್ಪಿಸೇಷನ್ ಹುಬ್ಬಳ್ಳಿ ಎನ್ನತಕ್ಕಂತಹ ಒಂದು ಸೆಮಿನಾರ್ ಆದ ಮೇಲೆ ನಿರಂತರವಾಗಿ ಡೆಕ್ಕನ್ ಏರ್‌ವೇಸ್ ಇಂಡಿಯನ್ ಏರ್‌ಲೈನ್ಸ್ ಜೊತೆಯಲ್ಲಿ, ಅಲ್ಲದೆ ಜೆಟ್ ಏರ್‌ಲೈನ್ಸ್ ಅದರ ಅಧ್ಯಕ್ಷರು ನನಗೆ ದಾವೂಸ್‌ನಲ್ಲಿ ಆ ಸೆಮಿನಾರ್‌ನಲ್ಲಿ ಭಾಗವಹಿಸಲಿಕ್ಕೆ ಬಂದಿದ್ದರು. ನಾನು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದೆ ಅಲ್ಲಿ ಅವರ ಜೊತೆ ಡಿಸ್‌ಕಸ್ ಮಾಡಿದ ಒಂದೇ ಒಂದು ವಿಷಯ ಏನಿದೆ ಅಂದರೆ ಈ ಸ್ಟಾರ್ಟ್ ಮಾಡಬೇಕು ಎಂದು ಅವರು ನನಗೆ ಒಂದು ಷರತ್ತನ್ನು

ಹಾಕಿದರು, ಏನೆಂದರೆ ಫೀಡರ್ ಏರ್‌ಲೈನ್ಸ್ ಅನ್ನು ಟರ್ಬೊ ಪ್ಯೂಯೆಲ್ ಮೇಲೆ ಹಾಕಿರುವ ಟ್ಯಾಕ್ಸ್‌ನ್ನು ಮನ್ನಾ ಮಾಡಿ ಅಥವಾ ಕಡಿಮೆ ಮಾಡಿ ಅಮಾಂತ ಹೇಳಿದರು. ನಾನು ಆಗ ಅವರಿಗೆ ಇದನ್ನು ಕಡಿಮೆ ಮಾಡುತ್ತೇನೆ Provided ನೀವು ಈ ಫೀಡರ್ ಸರ್ವೀಸ್. ಅನ್ನು ಪ್ರಾರಂಭ ಮಾಡಿದ ಮೇಲೆ ಈ ವಿನಾಯಿತಿಯನ್ನು ರಾಜ್ಯ ಸರ್ಕಾರ ನಿಮಗೆ ಕೊಡುತ್ತದೆಂದು ಹೇಳಿದ್ದೆ. ಅದೃಷ್ಟವಶಾತ್ ಡೆಕ್ಕನ್ ಏರ್‌ವೇಸ್‌ನವರು ಮುಂದೆ ಬಂದಿದ್ದಾರೆ ಅವರು ಈ ಕೆಲಸಕ್ಕೋಸ್ಕರ ಸುಮಾರು 8 ರಿಂದ 10 ವಿಮಾನಗಳನ್ನು ವೆಟಲೀಸ್ ಮೇಲೆ ತೆಗೆದುಕೊಳ್ಳುತ್ತಿದ್ದಾರೆ, ಅವರು ನನ್ನನ್ನು ಕೇಳಿದ್ದಾರೆ, ಈ ಆಗಸ್ಟ್ ತಿಂಗಳಲ್ಲಿ ಯಾವಾಗ ಈ ಫೀಡರ್ ಸರ್ವೀಸ್‌ನ ಪ್ರಾರಂಭೋತ್ಸವಕ್ಕೆ ಮಾಡಲು ಅವಕಾಶ ಆಗುತ್ತದೆಂದು ಕೇಳಿದ್ದಕ್ಕೆ ನೀವು ಯಾವಾಗ ಪ್ರಾರಂಭೋತ್ಸವ ಮಾಡುತ್ತೀರೆಂದು ಹೇಳಿದರೆ ಆಗಸ್ಟ್‌ನಲ್ಲಿ ಯಾವೂಗಲಾದೂ ಕೂಡ ನಿಮಗೆ ಸಮಯ ಕೊಡುತ್ತೇನೆಂದು ಹೇಳಿದ್ದೇನೆ. ಅದುದರಿಂದ ನಾವು ನೀವು ನಿರೀಕ್ಷೆ ಮಾಡಬಹುದು ಅಂತಿಮವಾಗಿ ಇದು ಡೆಕ್ಕನ್ ಏರ್‌ವೇಸ್‌ನವರ ಮೇಲೆ ನಿಂತಿದೆ, ಅವರು ಓಡಾಡಿಸಿದಾಗ ನಾವು ಓಡಾಡಿತು ಅಂತ ಹೇಳಬಹುದು ಅದಕ್ಕೆ ಪೂರಕವಾದಂತಹ ಏನೆಲ್ಲಾ ಏರ್ಪಾಡುಗಳನ್ನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದೇವೆ ಅಂತ ಭರವಸೆಯನ್ನು ಕೊಡುತ್ತೇನೆ, ಮಾನ್ಯ ಸಚಿವರು ಇನ್ನು ಮುಂದೆ ಹೇಳುತ್ತಾರೆ.

ಶ್ರೀ ಟಿ. ಜಾನ್ :– ಮಾನ್ಯ ಸದಸ್ಯರುಗಳು ಬೆಂಗಳೂರು ಹುಬ್ಬಳ್ಳಿಗೆ ಮಾತ್ರ ಈ ಸರ್ವೀಸನ್ನು ಮಾಡಿದರೆ ನಮ್ಮ ರಾಜ್ಯದ ಬೆಳವಣಿಗೆಗೆ ಸರಿಯಾಗುವುದಿಲ್ಲವೆಂದು ಹೇಳಿದ್ದಾರೆ ಇದು ನಿಜವಾದ ಮಾತು ಆದ್ದರಿಂದಲೇ ನಾವು ಈಗಾಗಲೇ ಷೆಡ್ಯೂಲ್ಡ್ ಫಸ್ಟ್ ಏರ್‌ಕ್ರಾಫ್ಟ್ ಬೆಂಗಳೂರು – ಕೊಯಮತ್ತೂರು, ಕೊಯಮ್ಮತ್ತೂರು–ಬೆಂಗಳೂರು, ಮಂಗಳೂರು–ಬೆಂಗಳೂರು, ಬೆಂಗಳೂರು–ಮಂಗಳೂರು, ಬೆಂಗಳೂರು–ಬೆಳಗಾಂ, ಬೆಳಗಾಂ–ಮುಂಬೈ ಮುಂಬೈ–ಹುಬ್ಬಳ್ಳಿ, ಹುಬ್ಬಳ್ಳಿ–ಬೆಂಗಳೂರು, ಬೆಂಗಳೂರು–ಹೈದರಾಬಾದ್, ಹೈದರಾಬಾದ್–ಬೆಂಗಳೂರು ಇಷ್ಟು ಸ್ಥಳಗಳಿಗೆ ಈ ಒಂದು ಸರ್ವೀಸನ್ನು ಮಾಡಲಿಕ್ಕೆ ಡೆಕ್ಕನ್ ಏರ್‌ವೇಸ್‌ನವರು ಒಪ್ಪಿಕೊಂಡಿದ್ದಾರೆ ಇದು ಹಂತ ಹಂತವಾಗಿ ಮಾಡುತ್ತಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಮುಖ್ಯಮಂತ್ರಿಗಳು ಗುರುತಿಸಬೇಕಾದಂತಹ ಪ್ರಶ್ನೆಗೆ ಉತ್ತರವಿಲ್ಲದಿದ್ದ ಮೆಲೆ ಉಳಿಕೆ ಸಚಿವರನ್ನು ದೇವರೇ ಕಾಪಾಡಬೇಕು: ಕೃಷ್ಣಪೋಷಿತ ನಾಟಕಮಂಡಳಿ ಎಂದು ಹೇಳಿಕೋಂಡು ಹೋಗುತ್ತಿರಬೇಕು ನಾನು.

ಅಧ್ಯಕ್ಷರು :– ನೀವು ಸ್ವಯಂ ನಿವೃತ್ತಿ ಬಗ್ಗೆ ಕೇಳಿದ್ದೀರಿ, ಎಲ್ಲಾ ಇಲಾಖೆಗಳಿಂದ ಅವರು ಫಿಗರ್ಸ್ ತೆಗೆದುಕೊಳ್ಳಬೇಡವೇ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಒಂದು ತಿಂಗಳಿಗೆ ಮುಂಚೆ ಈ ಪ್ರಶ್ನೆಯನ್ನು ಕೊಟ್ಟಿರುವುದು. ಅಧಿಕಾರಿಗಳು ಸರ್ಕಾರಕ್ಕೆ ಉತ್ತರ ಕೊಡದೇ ಇದ್ದರೆ ಇನ್ನೂ ಯಾರಿಗೆ ಕೊಡುತ್ತಾರೆ? ನಮ್ಮನ್ನು ಜನ ಕೇಳುತ್ತಾರಲ್ಲಾ ಉತ್ತರವೇನು ಕೊಡಬೇಕು?

ಅಧ್ಯಕ್ಷರು :– ನೀವು 15 ದಿವಸ ಮುಂಚೆ ಈ ಪ್ರಶ್ನೆಯನ್ನು ಕೊಟ್ಟಿರುವುದು, ಅವರಿಗೆ ಉತ್ತರ ತರಿಸಿಕೊಳ್ಳಲಿಕ್ಕೆ ಸಮಯ ಬೇಕು. ಮುಂದಿನ ವಾರ ಈ ಪ್ರಶ್ನೆಯನ್ನು ಹಾಕಿಸೋಣ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಇದೊಂದೇ ಉದಾಹರಣೆಯಲ್ಲ, ಬೇರೆ ಬೇರೆ ಕಾರಣಗಳಲ್ಲಿ ನಾವು 15 ದಿವಸಗಳ ಮುಂಚೆ ನೋಟಿಸ್ ಕೊಟ್ಟಿರುತ್ತೇವೆ, ಇದು ಸ್ವಯಂನಿವೃತ್ತಿಗೆ ಸಂಬಂದಿಸಿದ್ದು ಲಕ್ಷಗಟ್ಟಲೆ ಜನರ ಮಾಹಿತಿ ತರಿಸಿಕೊಳ್ಳಬೇಕಾಗಿಲ್ಲ, ಸಾವಿರಾರು

ಜನ ಇರಬಹುದು ತರಿಸಿಕೊಂಡು ಉತ್ತರಿಸಬಹುದಾಗಿತ್ತು ಆದರೆ "ಏಕೆ ಹೀಗಾಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು :– ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 442 (3873)ರ ದಿನಾಂಕ : 22–3–2003ರಲ್ಲಿ ಮಂಡಿಸಿರುವ ಪ್ರಶ್ನೆಗೆ ಎಲ್ಲಾ ಇಲಾಖೆ ಕಾರ್ಯದರ್ಶಿಗಳಿಂದ ಉತ್ತರಿಸಬೇಕಾಗಿರುವುದರಿಂದ ಮತ್ತು ಕ್ಷೇತ್ರೀಯ ಇಲಾಖೆಗಳಿಂದ ಪಡೆದು ಕ್ರೋಢೀಕರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಎರಡು ವಾರಗಳ ಸಮಯ.

ಶ್ರೀ ಜಗದೀಶ್ ಶೆಟ್ಟರ್ :– ಆ ವೇಳೆಗೆ ಸದನ ಮುಗಿದು ಹೋಗಿರುತ್ತದೆ, ಪ್ರಶ್ನೆ ಕೇಳಿ ಉತ್ತರ ಪಡೆಯುವಂತಹ ಶಾಸಕರ ಹಕ್ಕು ಮೊಟಕಾಗುತ್ತದೆ, ಅಧ್ಯಕ್ಷರೇ, ನೀವು ನಮ್ಮ ರಕ್ಷಣೆ ಮಾಡಬೇಕಾಗುತ್ತದೆ.

ಅಧ್ಯಕ್ಷರು :– ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ, ನಿಮಗೆ ಸದನ ಮುಗಿಯುವುದರೊಳಗೆ ಉತ್ತರ ನೀಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ :– ನಾವು ಕಚೇರಿಗಳಿಗೆ ಹೋದರೆ, ವಿಧಾನಸಭೆಯಲ್ಲಿ ಅಧಿವೇಶನ ನಡೆಯುತ್ತಿದೆ, ನಮಗೆ ಸಿಕ್ಕಾಪಟ್ಟೆ ಪಲ್.ಎ.ಪ್ರಶ್ನೆಗಳು ಬರುತ್ತಿವೆ, ಬೇರೆ ಏನೂ ಕೆಲಸಗಳನ್ನೆಲ್ಲ ಮಾಡಲಾಗುತ್ತಿಲ್ಲ ಅಂತ ಹೇಳುತ್ತಾರೆ ಆದರೆ ಇಲ್ಲಿ ಕೇಳಿದರೆ ಪ್ರಶ್ನೆ ಹೆಲ್ಡ್ ಓವರ್ ಆಗಿರುತ್ತದೆ ಅದಕ್ಕೆ ಉತ್ತರ ಬರುವುದಿಲ್ಲ, ಹೀಗಾದರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ನಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು :– ಸದನ ಮುಗಿಯುವುದರೊಳಗೆ ನಾನು ಉತ್ತರವನ್ನು ತರಿಸುತ್ತೇನೆ.

ಗೊಂದಲ

ಅಧ್ಯಕ್ಷರು :– ಶಂಕರಲಿಂಗೇಗೌಡರೇ, ಸುಮ್ಮನಿರಿ. ಹೀಗೆ ಮಾಡಿದರೆ ಹೇಗೆ?

(ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರವರು ಸದನದಿಂದ ನಿರ್ಗಮಿಸಿದರು)

ರಾಜ್ಯದಲ್ಲಿ ಹೊಸದಾಗಿ ಹೋಬಳಿ ಮತ್ತು ಪಂಚಾಯ್ತಿ ಕೇಂದ್ರಗಳಲ್ಲಿ ಬಾರ್ ತೆರೆಯುವುದು

443 (3998) : ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂತನವಾಗಿ ಹೋಬಳಿ ಮತ್ತು ಪಂಚಾಯ್ತಿ ಕೇಂದ್ರಳಲ್ಲಿ ಬಾರ್ (ಮದ್ಯದಂಗಡಿ)ಗಳನ್ನು ತೆರೆಯುತ್ತೇವೆಂದು ಘೋಷಣೆ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಬಾರ್‌ಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಹೋಬಳಿ ಮತ್ತು ಪಂಚಾಯ್ತಿ ಕೇಂದ್ರಗಳಲ್ಲಿ ತೆರೆಯಲು ತೀರ್ಮಾನಿಸಿದೆ?

ಇ) ಸದರಿ ತೀರ್ಮಾನದಿಂದ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲವೇ?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ :– ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. 'ರಾಜ್ಯದಲ್ಲಿ ನೂತನವಾಗಿ ಹೋಬಳಿ ಮತ್ತು ಪಂಚಾಯ್ತಿ ಕೇಂದ್ರಗಳಲ್ಲಿ ಮದ್ಯದಂಗಡಿಗಳನ್ನು ತೆರೆಯುತ್ತೇವೆಂದು